ಒ.ಎಸ್.ನಂಃ16/2017
ಪಿ.ಡಬ್ಲೂ.2

**ದಿಃ24.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ-**ಪ್ರತಿವಾದಿ ಪರ ಶ್ರೀ**. B.V.R.,** ವಕೀಲರಿಂದಃ-

ನನ್ನ ಸ್ವಂತ ಊರು ಹಾಲೇಕಲ್ಲು ಗ್ರಾಮ ಇರುತ್ತದೆ . ನನಗೆ ವಾದಿ ಮತ್ತು ಪ್ರತಿವಾದಿ ಇಬ್ಬರ ಕುಟುಂಬ ಪರಿಚಯ ಇರುತ್ತಾರೆ ಎಂದರೆ ಸರಿ. ಪ್ರತಿವಾದಿಯವರ ಗಂಡನ ತಂದೆಯ ಹೆಸರು ಚೆನ್ನಬಸಪ್ಪ ಇರುತ್ತದೆ . ನನಗೆ ನಮ್ಮ ಊರಿನಲ್ಲಿ ಪ್ರತಿವಾದಿಯ ಗಂಡನ ತಂದೆ ಚೆನ್ನಬಸಪ್ಪ ಅವರಿಗೆ ಸಂಬದಿಸಿದ ಹಾಗೆ ಜಮೀನುಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ . ಅವರಿಗೆ ಹಾಲೇಕಲ್ಲು ಗ್ರಾಮಕ್ಕೆ ಸಂಬಂದಿಸಿದ ಸರ್ವೆ ನಂಬರ್ 68 ರಲ್ಲಿಸುಮಾರು 5 ಎಕರೆ 20 ಗುಂಟೆ ಇರುತ್ತದೆ ಎಂದರೆ ಸರಿ. ಸದರಿ 5 ಎಕರೆ 20 ಗುಂಟೆ ಜಮೀನನ್ನು ದಿಃ 20.03.1979 ರಂದು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೋತ್ತಿಲ್ಲ. ಚೆನ್ನಬಸಪ್ಪ ಅವರು ಸದರಿ ಜಮೀನನ್ನು ಹಂಪಣ್ಣ ಅವರಿಂದ ಖರೀದಿ ಮಾಡಿದ ಬಗ್ಗೆ ತಿಳಿದುಕೊಂಡಿರುತ್ತೇನೆ . ವಾದಿಯ ತಂದೆ ಹೆಸರು ಚೆನ್ನಪ್ಪ ಇರುತ್ತದೆ . ವಾದಿಯ ಅಣ್ಣನ ಹೆಸರು ನಾಗರಾಜಪ್ಪ ಇರುತ್ತದೆ . ವಾದಿ ಅಲ್ಪವಯಸ್ಕರು ಇದ್ದಾಗ , ವಾದಿಯ ಅಣ್ಣ ನಾಗರಾಜಪ್ಪ ಮತ್ತು ಅವರ ತಂದೆ ಚೆನ್ನಪ್ಪ ಅವರು ಮತ್ತು ವಾದಿಯ ಪರವಾಗಿ ಮೈನರ್ ಗಾರ್ಡಿಯನ್ ಆಗಿ ಪ್ರತಿವಾದಿ ಮಾವ ಚೆನ್ನಬಸಪ್ಪ ಅವರಿಗೆ ದಿಃ 20.03.1979 ರಲ್ಲಿ ಸುಮಾರು 5 ಎಕರೆ 20 ಗುಂಟೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೋತ್ತಿಲ್ಲ . ನಾನು ಸದರಿ ಜಮೀನನ್ನು ನೋಡಿರುತ್ತೇನೆ . ಸದರಿ 5 ಎಕರೆ 20 ಗುಂಟೆ ಜಮೀನಿನ ಸುತ್ತ ಕಲ್ಲುಕಟ್ಟೆ ಇರುತ್ತದೆ ಎಂದರೆ ಸಾಕ್ಷಿ 3 ಕಡೆ ಕಲ್ಲುಕಟ್ಟೆ ಇರುತ್ತದೆ ಉತ್ತರ ದಿಕ್ಕಿಗೆ ಮಣ್ಣಿನ ಏರಿ ಇರುತ್ತದೆ ಎಂದು ಹೇಳುತ್ತಾರೆ . ಸದರಿ ಮಣ್ಣಿನ ಏರಿ ಸುಮಾರು 6 ಅಡಿ ಇರುಬಹುದು . ಸದರಿ ಕಲ್ಲುಕಟ್ಟೆ ಸುಮಾರು 3-4 ಅಡಿ ಎತ್ತರ , 3 ಅಡಿ ಅಗಲ ಇರುತ್ತದೆ ಎಂದರೆ ಸರಿ. ಸದರಿ ಕಲ್ಲುಕಟ್ಟೆ ಮತ್ತು ಏರಿ ಮಧ್ಯೆದಲ್ಲಿ ಇರುವ ಜಮೀನುನನಗೆ ತಿಳುವಳಿಕೆ ಬಂದಾಗಲಿಂದಲೂ ಪ್ರತಿವಾದಿ ಮತ್ತು ಅವರ ಗಂಡನ ಕುಟುಂಬದವರು ಸ್ವಾಧೀನ ಇರುತ್ತಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಪ್ರತಿವಾದಿ ಕುಟುಂಬದವರೇ ಅಡಿಕೆ ಬೆಳೆಯನ್ನು ಬೆಳೆದಿರುತ್ತಾರೆ ಎಂದರೆ ಸರಿ. ಸದರಿ ಅಡಿಕೆ ಬೆಳೆಯಲು ಎರಡುಬೋರ್ ವೇಲ್ ಗಳನ್ನು

ಅದೇ ಜಮೀನಿನಲ್ಲಿ ಪ್ರತಿವಾದಿಯ ಹಾಕಿಸಿರುತ್ತಾರೆ ಎಂದರೆ ಸರಿ. ಸದರಿ ಎರಡು ಬೋರ್ ವೇಲ್ ಗಳು ಸುಮಾರು 50 ರಿಂದ 60 ಅಡಿ ಅಂತರದಲ್ಲಿಇದ್ದು ಅವು ಪಶ್ಚಿಮ ದಿಕ್ಕಿನಲ್ಲಿ ಇರುತ್ತವೆ . ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಹಾಗೆ ದಾವಾ ಸ್ವತ್ತು ಭಾಗ 1 ಮತ್ತು 2 ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ . ಪ್ರತಿವಾದಿಯ ಜಮೀನಿನ ಉತ್ತರ ದಿಕ್ಕಿಗೆ ವಾದಿಯ ಜಮೀನು ಇರುತ್ತದೆ . ಸದರಿ ಬೋರ್ ವೆಲ್ ಗಳು ವಾದಿಯ ಜಮೀನಿನ ದಕ್ಷಿಣ ದಿಕ್ಕಿಗೆ ಇರುತ್ತದೆ . ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿಗಳು ಅಕ್ರಮವಾಗಿ ಪ್ರವೇಶಿಸಿ ಅತೀಕ್ರಮ ಪಡಿಸಿಕೊಂಡ ಬಗ್ಗೆ ತಿಳಿಸಿರುವುದಿಲ್ಲ . ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಹಾಗೆ ವಾದಿ ಮತ್ತು ಪ್ರತಿವಾದಿಗಳ ನಡುವೆ ಪಂಚಾಯತಿ ಸನ್ 2016-17 ರಲ್ಲಿ ನಡೆದಿರುತ್ತದೆ ದಿನಾಂಕ ನನಗೆ ನಿಖರವಾಗಿ ಗೋತ್ತಿರುವುದಿಲ್ಲ . ಸದರಿ ಪಂಚಾಯತಿಯಲ್ಲಿ ಸಿ ಜಿ ಬಸವರಾಜಪ್ಪ , ಶಿವಪ್ಪ , ಕುಬೇಂದ್ರಪ್ಪ, ಶೇಖರಪ್ಪ, ನಾನು ಮತ್ತು ರಾಮಚಂದ್ರಪ್ಪ ಇರುತ್ತೇವೆ. ಸದರಿ ಪಂಚಾಯತಿಯನ್ನು ವಾದಿ ಸೇರಿಸಿರುತ್ತಾರೆ . ಸದರಿ ಪಂಚಾಯತಿ ವಿಚಾರಗಳನ್ನು ನನ್ನ ಮುಖ್ಯವಿಚಾರಣೆಯಲ್ಲಿ ತಿಳಿಸಿರುತ್ತೇನೆ . ಸನ್ 2017 ರಲ್ಲಿ ವಾದಿಯ ಸರ್ವೆ ಮಾಡಿಸಿರುತ್ತಾರೆ , ದಿನಾಂಕ ತಿಂಗಳು ನನಗೆ ನಿಖರವಾಗಿ ಗೋತ್ತಿರುವುದಿಲ್ಲ . ನಾನು ಸದರಿ ಸರ್ವೆ ಮಾಡಿಸಿದಾಗ ಹಾಜರು ಇದ್ದೇ ಅದಕ್ಕೆ ನಾನು , ರಾಮಚಂದ್ರಪ್ಪ , ಸಹಿ ಮಾಡಿರುತ್ತೇನೆ . ಸರ್ವೆ ಮಾಡುವ ಸಮಯಕ್ಕೆ ಶಿವಣ್ಣ , ಶೇಖರಪ್ಪ ಮತ್ತು ಕುಬೇಂದ್ರಪ್ಪ ಇದ್ದೇವು ನಾವು ಎಲ್ಲರೂ ಸರ್ವೆ ದಾಖಲೆಗೆ ಸಹಿ ಮಾಡಿರುತ್ತೇವೆ . ಸದರಿ ದಾಖಲೆಯು ವಾದಿಯು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನನಗೆ ಗೋತ್ತಿಲ್ಲ . ನಾನು ಅದನ್ನು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲ . ನಾನು ಸರ್ವೆ ಆದ ಸಂದರ್ಭದಲ್ಲಿ ಹಾಜರು ಇರಲಿಲ್ಲ ಯಾವುದೇ ದಾಖಲೆಗಳಿಗೂ ಸಹಿ ಮಾಡಿರುವುದಿಲ್ಲ , ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಎಡಿಎಲ್ ಆರ್ ಗೆ ವಾದಿ ಅರ್ಜಿ ಸಲ್ಲಿಸಿದ ಬಗ್ಗೆ ತಿಳಿಸಿರುವುದಿಲ್ಲ . ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರವನ್ನು ಓದಿತಿಳಿದುಕೊಂಡು ನಂತರವೇ ಸಹಿ ಮಾಡಿರುತ್ತೇನೆ .

<u>ಮರು ವಿಚಾರಣೆ:</u> ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು**,** ಜಗಳೂರು